ಮತ್ತು ನಾದಲಿಗಳಲ್ಲಿ 66/11 ಕೆ ವಿ ವಿದ್ಯುತ್ ಉಪ ಕೇಂದ್ರಗಳು ಈಗಾಗಲೇ ಕಾರ್ಯನಿರ್ವಹಿಸುತ್ತಿದೆ ಗೌರಿಬಿದನೂರು ತಾಲ್ಲೂಕಿನ ಗುಂಡ್ಲು ಕೊತ್ತೂರಿನ ಬಳಿ ನೂತನ 66/11 ಕೆ ವಿ ವಿದ್ಯುತ್ ನಬ್ ಸ್ಟೇಷನ್ನನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಕಾಮಗಾರಿ ಗುತ್ತಿಗೆಯನ್ನು ಗುತ್ತಿಗೆದಾರರಿಗೆ ದಿನಾಂಕ 8 12 2006 ರಂದು, ವಹಿಸಲಾಗಿದ್ದು ಕಾಮಗಾರಿಯನ್ನು ಪ್ರಾರಂಭಿಸಲಾಗಿರುತ್ತದೆ ಕಾಮಗಾರಿಯು ಸೆಪ್ಟೆಂಬರ್ 2007ರ ಅಂತ್ಯಕ್ಕೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ

ಸೋಮೇನಹಳ್ಳಿಯಲ್ಲಿ ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾಪ ಸದ್ಯಕ್ಕೆ ಇರುವುದಿಲ್ಲ

446 (346) **ಶ್ರೀ ಶ್ರೀರಾಮರೆಡ್ಡಿ ಜಿ ವಿ (ಬಾಗೇಪಲ್ಲಿ)** ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಾ ಡಿ ಎಂ ನಂಜುಂಡಪ್ಪ ವರದಿಯನ್ವಯ ಅತಿ ಹಿಂದುಳಿದ ತಾಲ್ಲೂಕುಗಳಲ್ಲಿ ರಸ್ತೆಗಳ ಅಭಿವೃದ್ಧಿಗಾಗಿ ನಬಾರ್ಡ್ ಯೋಜನೆಯಡಿ ವಿಶೇಷ ಅನುದಾನ ನೀಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೆ,

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

**ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)**

ಅ) ಡಾ ಡಿ ಎಂ ನಂಜುಂಡಪ್ಪ ಸಮಿತಿಯ ಅಂತಿಮ ವರದಿಯನ್ನು ಜೂನ್–2202 ರಲ್ಲಿ ಪಡೆಯಲಾಗಿದೆ ಈ ವರದಿಯಲ್ಲಿ ಅತಿ ಹಿಂದುಳಿದ ತಾಲ್ಲೂಕುಗಳು ಎಂದು ಗುರುತಿಸಲಾಗಿರುವ 39 ತಾಲ್ಲೂಕುಗಳಲ್ಲಿ 2003–04 2004–05 ಮತ್ತು 2005–06ನೇ ಸಾಲುಗಳಲ್ಲಿ 286 ರಸ್ತೆ ಮತ್ತು ಸೇತುವೆ ಕಾಮಗಾರಿಗಳನ್ನು 187 24 ಕೋಟಿ ರೂ ಮೊತ್ತದಲ್ಲಿ ನಬಾರ್ಡ್‌ನಿಂದ ಅನುಮೋದನೆ ಪಡೆದು ಕೈಗೊಳ್ಳಲಾಗಿದೆ ಇದಲ್ಲದೆ 2006–07ನೇ ಸಾಲಿನಲ್ಲಿ 107 ರಸ್ತೆ ಮತ್ತು ಸೇತುವೆ ಕಾಮಗಾರಿಗಳನ್ನು 72 60 ಕೋಟಿ ರೂ ಮೊತ್ತದಲ್ಲಿ ಕೈಗೊಳ್ಳಲು ಪ್ರಸ್ತಾವಿನಲಾಗಿದೆ

ಆ) ಮೇಲೆ ತಿಳಿಸಿರುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ

447 (151) **ಶ್ರೀ ಸುನೀಲ್ ಕುಮಾರ್ ವಿ (ಕಾರ್ಕಳ)** ಮಾನ್ಯ ಸಹಕಾರ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?